ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/35-2/ಎಲ್ಆರ್‌ಡಿಸಿ/ಎನ್‌ಬಿಎ/2014-15

**ನಿರ್ದೇಶಕರ ಕಚೇರಿ,**
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ
ಬೆಂಗಳೂರು-560001
ದಿನಾಂಕ: 30.8.2016

**:ಜ್ಞಾಪನ:**

ವಿಷಯ: **ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ರಾಷ್ಟ್ರೀಯ ಮಾನ್ಯತಾ ಮಂಡಳಿ (NBA) ಯಿಂದ ಮಾನ್ಯತೆ ಪಡೆಯಲು ಕೈಗೊಂಡ ಚಟುವಟಿಕೆಗಳ ಪ್ರಗತಿ ನೀಡುವ ಕುರಿತು.**

ಉಲ್ಲೇಖ: **ನಿರ್ದೇಶನಾಲಯದ ಪತ್ರ ಸಂ: ಡಿಟಿಇ/35-2/ಎಲ್ಆರ್‌ಡಿಸಿ/ಎನ್‌ಬಿಎ/2014-15, ದಿ: 27.07.2016.**

*-*-*-*-*

ಮಾನ್ಯ ಉನ್ನತ ಶಿಕ್ಷಣ ಸಚಿವರ ನಿರೀಕ್ಷೆಯಂತೆ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಟ್ಟು, ಎಲ್ಲಾ ಕಾರ್ಯಕ್ರಮಗಳಿಗೆ ಮಾನ್ಯತೆ ಪಡೆಯುವುದು ಅವಶ್ಯವೆಂದು ತಿಳಿಸಿರುವ ಹಿನ್ನಲೆಯಲ್ಲಿ ಹಾಗೂ ನಿಯಮಿತ ಕಾಲಾವಧಿಯೊಳಗೆ ಈ ಪ್ರಕ್ರಿಯೆಯು ಮುಗಿಸುವಂತೆ ಸೂಚಿಸಿದ ಹಿನ್ನಲೆಯಲ್ಲಿ, ಮೊದಲ ಹಂತದ ರಾಜ್ಯದ 16 ಪಾಲಿಟೆಕ್ನಿಕ್‌ಗಳ 32 ಪ್ರೋಗ್ರಾಂಗಳನ್ನು ಗುರುತಿಸಿರುವುದು ಸರಿಯಷ್ಟೆ.

ಸದರಿ ಸಂಸ್ಥೆಗಳಿಗೆ ಅವಶ್ಯಕವಾದ ಮಾನ್ಯತಾ ಸಂಬಂಧಿ ವಿವಿಧ ಕಾರ್ಯಗಾರಗಳನ್ನು ಹಮ್ಮಿಕೊಂಡು, ಸಂಸ್ಥೆಯಲ್ಲಿ ಜರೂಗಿಸಬೇಕಾಗಿರುವ ಗುಣಮಟ್ಟದ ಚಟುವಟಿಕೆಗಳು, ತಯಾರಿಸಬೇಕಾದ ದಾಖಲಾತಿಗಳು, ಇಡಬೇಕಾಗಿರುವ ಕಡತಗಳ ಸಮಗ್ರ ವಿವರಗಳನ್ನು ಈಗಾಗಲೇ ಸಂಬಂಧಿತ ಸಂಸ್ಥೆಗಳಿಗೆ ನೀಡಿರುವುದೂ ಸರಿಯಷ್ಟೆ. ಅಲ್ಲದೇ, ಈ ಸಂಸ್ಥೆಗಳ ಪ್ರಾಚಾರ್ಯರು, ವಿಭಾಗಾಧಿಕಾರಿಗಳು ಮತ್ತು ಸಂಯೋಜಕರುಗಳನ್ನೊಳಗೊಂಡಂತೆ 3 ದಿನಗಳ ವಿಶೇಷ ತರಬೇತಿ ಕಾರ್ಯಾಗಾರವನ್ನು ದಿ:2.8.2016 ರಿಂದ 4.8.2016 ರವರೆಗೆ ನುರಿತ ತಜ್ಞರಿಂದ ಸಮಗ್ರವಾದ ಮಾನ್ಯತಾ ಸಂಬಂಧ ಚಟುವಟಿಕೆಗಳ ನಡೆಸುವಿಕೆ ಮತ್ತು ನಿರ್ವಹಣೆಗಳ ಬಗ್ಗೆ ನಡೆಸಿ ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ಸಂಸ್ಥೆಗಳನ್ನು ಸಜ್ಜುಗೊಳಿಸಲಾಗಿದೆ.

ಈ ಹಿನ್ನಲೆಯಲ್ಲಿ ಆಯ್ಕೆಯಾದ ಸಂಸ್ಥೆಗಳ ಪ್ರಾಚಾರ್ಯರು ಈ ಜ್ಞಾಪನದ ದಿನಾಂಕದಿಂದ 3 ತಿಂಗಳ ಕಾಲಾವಧಿಯೊಳಗೆ ಮಾನ್ಯತೆಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸುವ ಸಲುವಾಗಿ ಸಮಗ್ರವಾದ ಕ್ರಿಯಾಯೋಜನೆಯನ್ನು ತಯಾರಿಸಿ ಅದಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಸಾಧಿಸಿರುವ ಪ್ರಗತಿಯ ವರದಿಯನ್ನು ಪ್ರತಿ 15 ದಿನಗಳಿಗೊಮ್ಮೆ ಹಾರ್ಡ್ ಪ್ರತಿ ಹಾಗೂ ಸಾಫ್ಟ್ ಪ್ರತಿ (dtenba@gmail.com) ಯನ್ನು ನಿರ್ದೇಶನಾಲಯಕ್ಕೆ ತಪ್ಪದೇ ಕಳುಹಿಸಲು ಸೂಚಿಸಲಾಗಿದೆ.

ಅದರಂತೆ ಮೊದಲ ಹಂತದಲ್ಲಿ ತಮ್ಮ ಸಂಸ್ಥೆಗಳಲ್ಲಿ ಮಾನ್ಯತಾ ಪ್ರಕ್ರಿಯೆಯಲ್ಲಿ ಆಯ್ಕೆಯಾಗದ ಪ್ರೋಗ್ರಾಂಗಳು ಹಾಗೂ ಇನ್ನುಳಿದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಎಲ್ಲಾ ಪ್ರೋಗ್ರಾಂಗಳ ಮಾನ್ಯತಾ ಸಂಬಂಧಿ ಕ್ರಿಯಾಯೋಜನೆ ತಯಾರಿಸಿ ಹಾಗೂ ಸಾಧಿಸಲಾಗಿರುವ ಪ್ರಗತಿಯ ವರದಿಯನ್ನೂ ಸಹ ಇ-ಮೇಲ್ ಮೂಲಕ (dtenba@gmail.com) ಗೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು

ಗೆ,

1. ಸಂಬಂಧಿಸಿದ ಎಲ್ಲಾ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ಕೋಶ, ತಾ.ಶಿ.ನಿ, ಸೂಕ್ತ ಕ್ರಮಕ್ಕಾಗಿ.
3. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.